**ದಿನಾಂಕಃ 17.02.2023. ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಲಾಯಿತು.**

**ಪಾಟೀಸವಾಲುಃ ಶ್ರೀ. ರವಿ ಸಂಪ್ರತಿ ವಕೀಲರಿಂದ ಎದುರುದಾರರ ಪರವಾಗಿ.**

ಅಪಘಾತದ ಸಮಯದಲ್ಲಿ ನನ್ನ ಗಂಡ Synergistics ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಆದರೆ ಇನ್ನೊಂದು ಕಂಪನಿಯಲ್ಲಿ ಕೂಡಾ ಕೆಲಸ ಮಾಡುತ್ತಿದ್ದರು . ಪ್ರಮಾಣಪತ್ರದಲ್ಲಿ ಬರೆದಿರುವ ಅಂಶಗಳು ಎಲ್ಲ ಸತ್ಯವಾಗಿದೆ . ಕ್ಯೂ 3 ventures ನಿಂದ ನಿ.ಪಿ 12 ರಂತೆ ದಿನಾಂಕ 05.07.2021 ರಂದು ಕೆಲಸ ಬಿಟ್ಟಿರುತ್ತಾರೆ ಎಂದರೆ ಸರಿ . ಸದರಿ ಕಂಪನಿಯಲ್ಲಿ ಕೆಲಸ ಬಿಟ್ಟ ನಂತರ ಎಷ್ಟು ದಿನದಲ್ಲಿ ಸಂಪೂರ್ಣ ಹಣ ನೀಡಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ . ಒಬ್ಬ ವ್ಯಕ್ತಿಯು ಒಂದು ಕಂಪನಿಯಲ್ಲಿ ಮಾತ್ರ ಒಂದು ಬಾರಿಗೆ ಕೆಲಸ ಮಾಡಲು ಸಾಧ್ಯ ಎಂದರೆ ನನಗೆ ತಿಳಿದಿಲ್ಲ . ನನ್ನ ಗಂಡ ಬೆಳಿಗ್ಗೆ ಹೋದರೆ ಸಂಜೆ ಮನೆಗೆ ಬರುತ್ತಿದ್ದು ಸದರಿ ಕಂಪನಿಯ ಸಮಯ ನನಗೆ ತಿಳಿದಿಲ್ಲ. ಸದರಿ ಕಂಪನಿಯಲ್ಲಿ ನನ್ನ ಗಂಡ ಯಾವ ಸಮಯದಲ್ಲಿ ಕೆಲಸ ಮಾಡುತ್ತಿದ್ದರು ಎಂದು ಸದರಿ ಕಂಪನಿಯಿಂದ ನಾನು ತಿಳಿದುಕೊಂಡು ಹೇಳಬಹುದು. ನನ್ನ ಗಂಡ ಎರಡು ಕಡೆ ಕೆಲಸ ಮಾಡುತ್ತಿದ್ದರು ಎಂದು ಎರಡು ಕಂಪನಿಯವರಿಗೆ ತಿಳಿದಿರಬಹುದು. ಒಬ್ಬ ವ್ಯಕ್ತಿಯು ಎರಡು ಕಂಪನಿಯಲ್ಲಿ ಕೆಲಸ ಮಾಡುವುದು ಕಾನೂನಿಗೆ ವಿರುದ್ದ ಎಂದರೆ ನನಗೆ ಮಾಹಿತಿ ಇಲ್ಲ . ನಿ.ಪಿ 15 ರಲ್ಲಿ ದಿನಾಂಕ 06.08.2021 ರಂದು 60,500/- ರೂ 09.09.2021 ರಂದು 55,539/- ರೂ ಗಳು , ದಿನಾಂಕ 11.10.2021 ರಂದು 6,000/- ರೂಗಳು, 28.10.2021 ರಂದು 7,000/- ರೂಗಳು, ದಿನಾಂಕ 02.11.2021 ರಂದು 1,00,000/- ರೂಗಳು 16.11.2021 ರಂದು 50,000/- ರೂಗಳು, 11.12.2021 ರಂದು 55,539/- ರೂಾಗಳು ನನ್ನ ಗಂಡ ಕ್ಯೂ 3 ventures ನಲ್ಲಿ ಹಿಂದೆ ಕೆಲಸ ಮಾಡಿದ್ದ ಹಣವನ್ನು ನೀಡಿದ್ದಾರೆ ಎಂದರೆ ಸರಿಯಲ್ಲ. ನನ್ನ ಗಂಡ ಆದಾಯ ತೆರಿಗೆ ಪಾವತಿಸುತ್ತಿದ್ದರು. ಆದಾಯ ತೆರಿಗೆ ರಿಟರ್ನ್ಸ್ ಹಾಜರು ಪಡಿಸಬಹುದು. ನಿ ಪಿ 25 ದಾಖಲೆಯು Synergistics

ಕಂಪನಿಯ ಪಾರಂ 60 ಎಂದರೆ ಸರಿ. ನಿ ಪಿ 15 ರಲ್ಲಿ ನಮೂದಾಗಿರುವ ಹಣದ ಸಂದಾಯವನ್ನು ತೋರಿಸಿ ನನ್ನ ಗಂಡ ಕ್ಯೂ 3 ventures ನಲ್ಲಿ ಕೆಲಸ ಮಾಡುತ್ತಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಲ್ಲಿ ನಮೂದಿಸಿರುವ ಹಣ ಸಂದಾಯವು ನನ್ನ ಗಂಡ ಕೆಲಸ ಬಿಟ್ಟ ನಂತರ ಮಾಡಿರುವ ಕಂಪನಿಯ ಸೇಟ್ಲಮೆಂಟ್ ಎಂದರೆ ಸರಿಯಲ್ಲ .

**ಮರುವಿಚಾರಣೆಃ ಇರುವುದಿಲ್ಲ.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿ, ಓದಿ ಹೇಳಿ ನಂತರ ಸಹಿ ಪಡೆಯಲಾಯಿತು).

ಓ ಹೇ ಕೇ ಸ ಇದೆ.

5 ನೇ ಅಪರ ನ್ಯಾಯಾಧೀಶರು,
ಲಘು ವ್ಯವಹಾರಗಳ ನ್ಯಾಯಾಲಯ,
24 ನೇ ಎಸಿಎಂಎಂ ಮತ್ತು ಸದಸ್ಯರು ಎಂಎಸಿಟಿ.